RNU AIR DHARWAD

AUGUST 05, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ, ವಿಭು ಬಾಖ್ರು, ಉಚ್ಚ ನ್ಯಾಯಾಲಯದ, ಧಾರವಾಡ ಪೀಠಕ್ಕೆ ಪ್ರಥಮ ಬಾರಿಗೆ ಭೇಟಿ ನೀಡಿದ್ದಾರೆ. ಧಾರವಾಡ ಉಚ್ಚ ನ್ಯಾಯಾಲಯದ ಪೀಠದ, ವಕೀಲರ ಸಂಘದಿಂದ, ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ನ್ಯಾಯಾಂಗದ ಆಡಳಿತದ ಬಗ್ಗೆ, ಸಮೀಕ್ಷೆ ನಡೆಸಿ, ಬದ್ಧತೆಯಿಂದ ಪರಿಹರಿಸಲು, ಕ್ರಮ ಕೈಗೊಳ್ಳುವದಾಗಿ ತಿಳಿಸಿದರು.**

<><><>

**ರಾಜ್ಯದ ಗ್ರಾಮ ಪಂಚಾಯಿತಿಗಳ, ಅರಿವು ಕೇಂದ್ರಗಳಲ್ಲಿ, 79ನೇ ಸ್ವಾತಂತ್ರ್ಯ ದಿನಾಚರಣೆ ಮತ್ತು ವಿಜ್ಞಾನ ಚಟುವಟಿಕೆಗಳೊಂದಿಗೆ, ಮಕ್ಕಳಿಗಾಗಿ ಕಾರ್ಯಕ್ರಮ ರೂಪಿಸಲಾಗಿದೆ. 'ಆಗಸ್ಟ್ ತಿಂಗಳು ಪೂರ್ತಿ, ಸ್ವಾತಂತ್ರ್ಯೋತ್ಸವದ ಅಂಗವಾಗಿ, ಮಕ್ಕಳಿಗೆ ದೇಶಪ್ರೇಮ ಮೆರೆವ ಪ್ರೇರಣಾತ್ಮಕ ಹಾಗೂ ವೈಜ್ಞಾನಿಕ ಚಟುವಟಿಕೆಗಳನ್ನು ಆಯೋಜಿಸುತ್ತಿರುವುದಾಗಿ', ಪಂಚಾಯಿತಿ ರಾಜ್ ಖಾತೆ ಸಚಿವ, ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.**

<><><>

**'ಪ್ರಧಾನಮಂತ್ರಿ ಪರೀಕ್ಷಾ ಪೇ ಚರ್ಚಾ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು, ಕಳೆದ ಒಂದು ತಿಂಗಳಲ್ಲಿ, ದಾಖಲೆಯ ಅರ್ಜಿಗಳು ಸಲ್ಲಿಕೆಯಾಗಿದ್ದು, ಗಿನ್ನೀಸ್ ವಿಶ್ವ ದಾಖಲೆಗೆ ಪಾತ್ರವಾಗಿದೆ. ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪಾಲಕರೊಂದಿಗೆ, ಪ್ರಧಾನಮಂತ್ರಿಯವರು ನೇರವಾಗಿ ಸಂವಾದ ನಡೆಸುವ, ವಿಶಿಷ್ಟ ಕಾರ್ಯಕ್ರಮ, ಪರೀಕ್ಷಾ ಪೇ ಚರ್ಚಾ.**

<><><>

**ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಲ್ಲಿ, ಶಿಕ್ಷಣದ ಗುಣಮಟ್ಟ ಸುಧಾರಿಸಲು, 14 ಹೊಸ ಶಿಕ್ಷಣ ಕ್ಷೇತ್ರಗಳನ್ನು ಸೃಜಿಸುವಂತೆ ಕೋರಿ, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ಅವರಿಗೆ, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ ಖರ್ಗೆ ಪತ್ರ ಬರೆದಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ, 2024-25ನೇ ಶೈಕ್ಷಣಿಕ ಸಾಲಿನ, ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ, ಅತಿ ಕಡಿಮೆ ಫಲಿತಾಂಶ ಬಂದಿರುವ ಹಿನ್ನೆಲೆ, ಶೈಕ್ಷಣಿಕ ಕಾರ್ಯಕ್ರಮಗಳನ್ನು, ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು, ಮನವಿ ಮಾಡಿದ್ದಾರೆ.**

<><><>

**ರಾಜ್ಯದ ನಾಲ್ಕು ನಿಗಮಗಳ, ಸಾರಿಗೆ ಬಸ್ ನೌಕರರ ಮುಷ್ಕರದ ಹಿನ್ನೆಲೆ, ರಾಜ್ಯದ ಹಲವೆಡೆ, ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಗಳಲ್ಲಿ, ಇಂದು ಬೆಳಗ್ಗೆ 6 ಗಂಟೆಯಿಂದಲೇ ಬಸ್ ಸಂಚಾರ ಸ್ಥಗಿತಗೊಂಡಿದೆ. ಧಾರವಾಡ-ಹುಬ್ಬಳ್ಳಿ, ಹಾಸನ ಹಾಗೂ ಬಳ್ಳಾರಿಯಲ್ಲಿ, ಪ್ರಯಾಣಿಕರು, ಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳು, ಕಾರ್ಮಿಕರು, ಪರದಾಡುವಂತಾಯಿತು. ಖಾಸಗಿ ಬಸ್‌ಗಳ ಮೂಲಕ, ಕೆಲವೆಡೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ.**

ಆದರೆ, ಕೂಲಿ ಕಾರ್ಮಿಕ ಹೆಣ್ಣು ಮಕ್ಕಳು ಹಣವಿಲ್ಲದೇ, ಖಾಸಗಿ ಸಾರಿಗೆ ಬಳಸಲಾಗದೇ, ಕಾಲ್ನಡಿಗೆಯಲ್ಲೇ ತೆರಳಿದ್ದಾಗಿ, ನಮ್ಮ ಬಳ್ಳಾರಿ ಪ್ರತಿನಿಧಿ ವರದಿ ಮಾಡಿದ್ದಾರೆ. ಚಿಕ್ಕಬಳ್ಳಾಪುರದಲ್ಲಿ, ಶೇಕಡ 70 ರಷ್ಟು ಬಸ್ಸುಗಳು ಸಂಚರಿಸುತ್ತಿದ್ದು, ಜನ ಜೀವನ ಸುಗಮವಾಗಿದೆ. ಮಂಡ್ಯದಲ್ಲಿ, ಶೇಕಡ 80 ರಷ್ಟು ಸರ್ಕಾರಿ ಸಾರಿಗೆ ಬಸ್ ಸೇವೆ ಬಂದಾಗಿದೆ. ಖಾಸಗಿ ಬಸ್‌ಗಳ ಮೂಲಕ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು, ಸಾರಿಗೆ ಅಧಿಕಾರಿಗಳು, ತಿಳಿಸಿದ್ದಾರೆ. ಕೊಡಗಿನಲ್ಲಿ, ಖಾಸಗಿ ಹಾಗೂ ಹೊರಗುತ್ತಿಗೆ ಸಿಬ್ಬಂದಿ ಬಳಸಿ, 30 ಸಂಚಾರ ಮಾರ್ಗಗಳಿಗೆ, ಬದಲಿ ವ್ಯವಸ್ಥೆ ಕೈಗೊಂಡು, ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಲಾಗಿದೆ.

<><><>

ವಿಜಯಪುರ ಜಿಲ್ಲೆ, ನಾಗಠಾಣ ಕ್ಷೇತ್ರದ, ಕಗ್ಗೋಡ ಗ್ರಾಮದ ಪ್ರಗತಿಪರ ಕೃಷಿಕ, ನವೀನ ಮಂಗಾನವರ, 7 ಎಕರೆ ನೀರಾವರಿ ಜಮೀನಿನಲ್ಲಿ, ಥೈಲ್ಯಾಂಡ್‌ನ ವಿಶಿ ್ಟ ತಳಿಯ ಮಾವಿನ ಹಣ್ಣುಗಳನ್ನು ಬೆಳೆದು, ಗಮನ ಸೆಳೆದಿದ್ದಾರೆ. 3 ಸಾವಿರ ಮಾವಿನ ಗಿಡಗಳನ್ನು ನೆಟ್ಟು, ಸಂಪೂರ್ಣ ಸಾವಯವ ಪದ್ಧತಿಯಲ್ಲಿ ಪೋಷಿಸುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ, ಎಂ.ಬಿ.ಪಾಟೀಲ, ತಮ್ಮ ಎಕ್ಸ್ ಖಾತೆಯಲ್ಲಿ, ಈ ಪ್ರಯತ್ನವನ್ನು, ಶ್ಲಾಘಿಸಿದ್ದಾರೆ. ನಿತ್ಯ 10 ರಿಂದ 15 ಪೆಟ್ಟಿಗೆಗಳಲ್ಲಿ, ಹಣ್ಣು ಲಭ್ಯವಾಗುತ್ತಿದ್ದು, ಪ್ರತಿ ಹಣ್ಣಿನ ಪೆಟ್ಟಿಗೆಗೆ ಸಾವಿರ ರೂಪಾಯಿ ವರೆಗೆ, ಆದಾಯ ಗಳಿಸುತ್ತಿದ್ದಾರೆ ಎಂದು, ಸಂತಸ ವ್ಯಕ್ತಪಡಿಸಿದ್ದಾರೆ.

<><><>

ರಾಯಚೂರು ಜಿಲ್ಲೆ, ಸಿರವಾರದ ನೀರಾವರಿ ಇಲಾಖೆ ಮುಂಭಾಗದಲ್ಲಿ, ತುಂಗಭದ್ರಾ ಎಡದಂಡೆ ಕಾಲುವೆ ಸಮಸ್ಯೆ ಪರಿಹರಿಸುವಂತೆ, ಕಳೆದ ಒಂದು ವಾರದಿಂದ, ಪ್ರತಿಭಟನೆ ನಡೆಸುತ್ತಿರುವ ರೈತರನ್ನು, ಸಚಿವ ಎನ್.ಎಸ್.ಬೋಸರಾಜು ಭೇಟಿಯಾಗಿ, ಮನವಿ ಆಲಿಸಿದರು. ಮುಖ್ಯ ಅಭಿಯಂತರರೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಸಚಿವರು, ಸೂಕ್ತ ಕ್ರಮ ಕೈಗೊಂಡು, ರೈತರ ಸಮಸ್ಯೆಗಳಿಗೆ ಸಕಾಲಿಕವಾಗಿ ಸ್ಪಂದಿಸುವಂತೆ, ನಿರ್ದೇಶಿಸಿದರು.

<><><>

ಕಾಡಂಚಿನ ಗ್ರಾಮಗಳಲ್ಲಿ, ಕಾಡಾನೆ ಹಾಗೂ ಮಾನವ ಸಂಘರ್ಷ ನಿಯಂತ್ರಿಸಲು, ಕಳೆದ ಎರಡು ವರ್ಷಗಳಲ್ಲಿ, ರಾಜ್ಯಾದ್ಯಂತ, 115 ಕಿಲೋ ಮೀಟರ್ ಉದ್ದದ, ರೇಲ್ವೆ ಕಂಬಿಗಳ ತಡೆಗೋಡೆ ನಿರ್ಮಿಸಲಾಗಿದೆ ಎಂದು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಮೈಸೂರು ಜಿಲ್ಲೆ, ಹುಣಸೂರು ತಾಲೂಕು, ವೀರನ ಹೊಸಹಳ್ಳಿಯಲ್ಲಿ, ಅವರು ಮಾತನಾಡಿದರು. 500 ಕೋಟಿ ರೂಪಾಯಿ ವೆಚ್ಚದಲ್ಲಿ, 193 ಕಿಲೋ ಮೀಟರ್ ಉದ್ದದ, ರೇಲ್ವೆ ಕಂಬಿಗಳ ತಡೆಗೋಡೆ ಅಳವಡಿಕೆಗೆ ಅನುಮೋದನೆ ನೀಡಲಾಗಿದೆ ಎಂದರು.

<><><>

ತುಮಕೂರು ಜಿಲ್ಲೆ, ಮಧುಗಿರಿ ತಾಲೂಕು, ಮಿಡಿಗೇಶಿ ಬಳಿಯ, ಹನುಮಂತಪುರ ಗ್ರಾಮದ, ಕೆರೆಯ ಕೋಡಿ ಹರಿಯುವ, ಹಳ್ಳದ ಪಕ್ಕದ ಜಮೀನಿನಲ್ಲಿ, 19 ನವಿಲುಗಳು ಸಾವನ್ನಪ್ಪಿರುವ ಘಟನೆ ನಡೆದಿದೆ. ಅರಣ್ಯಾಧಿಕಾರಿಗಳು, 5 ಗಂಡು ಹಾಗೂ 14 ಹೆಣ್ಣು ನವಿಲುಗಳು ಮೃತಪಟ್ಟಿರುವುದಾಗಿ, ದೃಢಪಡಿಸಿದ್ದಾರೆ. ವಿಧಿ ವಿಜ್ಞಾನ ಪ್ರಯೋಗಾಲಯದಿಂದ ವರದಿ ಬಂದ ಬಳಿಕ, ನವಿಲುಗಳ ಸಾವಿಗೆ ನಿಖರ ಕಾರಣ ತಿಳಿಯಲಿದೆ ಎಂದು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮಲ್ಲಿಕಾರ್ಜುನ ತಿಳಿಸಿದ್ದಾರೆ.

<><><>

**ರಾಜ್ಯದಾದ್ಯಂತ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ, ರಭಸದ ಗಾಳಿಯೊಂದಿಗೆ, ನಾಳೆ ಮತ್ತು ನಾಡಿದ್ದು, ಚದುರಿದಂತೆ ಸಾಧಾರಣ ಮಳೆ ಹಾಗೂ ಅಲ್ಲಲ್ಲಿ ಭಾರಿ ಮಳೆ ಸಾಧ್ಯತೆ ಇದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ತಿಳಿಸಿದೆ. ರಾಜ್ಯದ ಒಳನಾಡು ಜಿಲ್ಲೆಗಳಲ್ಲಿ, ಅಲ್ಲಲ್ಲಿ ಚದುರಿದಂತೆ, ಹಗುರದಿಂದ ಸಾಧಾರಣ ಮಳೆ ಹಾಗೂ ಈ ತಿಂಗಳ 8ರ ವರೆಗೆ, ಭಾರಿ ಮಳೆಯಾಗುವ ಸಾಧ್ಯತೆಯಿದೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**